O.S.No. 207/2007 Club with 87/2007 D W - 1

ದಿನಾಂಕ 12.04.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. P.S.R. ವಕೀಲರಿಂದ :

ನನಗೆ ಈಗ 45 ವರ್ಷ. ಕನ್ನಡ ಓದಲು ಬರುತ್ತದೆ. ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನು ಹೇಳಿ ಬರೆಸಿರುತ್ತೇನೆ. ನಮ್ಮ ತಾಯಿ ಮರಿಯಮ್ಮ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ನಮ್ಮ ತಾಯಿ ಆರೋಗ್ಯವಾಗಿದ್ದು ಚೆನ್ನಾಗಿ ಓಡಾಡುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ಆರೋಗ್ಯ ಚೆನ್ನಾಗಿಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

SPA ಅನ್ನು ನನ್ನ ತಾಯಿ 207/2007, 87/ 2007 ಅನ್ನು ನಡೆಸಲು ಬರೆದುಕೊಟ್ಟಿರುತ್ತಾರೆ. SPA ದಲ್ಲಿ 87/2007 ದಾವೆಯನ್ನು ಮಾತ್ರ ನಡೆಸಲು ಬರೆದುಕೊಟ್ಟಿರುತ್ತಾರೆ. 207/2007 ದಾವೆಯನ್ನು ನಡೆಸಲು ಅಧಿಕಾರ ಪತ್ರವನ್ನು ನೀಡಿರುವುದಿಲ್ಲ ಸಾಕ್ಷಿ ಮುಂದುವರೆದು ಎರಡು ದಾವೆಗಳು ಕ್ಲಬ್ ಆಗಿದೆ ಎಂದು ನುಡಿಯುತ್ತಾರೆ.

SPA ದಲ್ಲಿ ಎರಡೂ ದಾವೆಗಳು ಕ್ಲಬ್ ಆಗಿರುವ ವಿಚಾರವನ್ನು ನಮೂದು ಮಾಡಿರುವುದಿಲ್ಲ. 207/07 ದಾವೆಯನ್ನು ನಡೆಸಲು ಅಧಿಕಾರ ಪತ್ರವನ್ನು ಕೊಡದೇ ಇದ್ದುದ್ದರಿಂದ ದಾವೆಯನ್ನು ನಡೆಸಲು ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ತಾಯಿಯ ಹೆಸರಿನಲ್ಲಿರುವ ಎಲ್ಲ ಆಸ್ತಿಗಳ ಬಗ್ಗೆ ಹಾಗೂ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಶಿವನಂಜಪ್ಪ ರವರು ನಮ್ಮ ತಾಯಿಯವರ ಮರಿಯಮ್ಮರ ವಿರುದ್ಧ O.S. 12/09 ದಾವೆಯನ್ನು ಸರ್ವೆ ನಂ.

80/1 ರಲ್ಲಿ 4 ಎಕರೆ 26 ಗುಂಟೆ ಗೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ತಾಯಿ ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಮರಿಯಮ್ಮ ರವರು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -31 ಎಂದು, ಒ. ಎಸ್. 12/09 ದಾವೆಯನ್ನು ಶಿವನಂಜಪ್ಪ ಮತ್ತು ನನ್ನ ತಾಯಿ ಮರಿಯಮ್ಮ ರವರು ರಾಜೀ ಮಾಡಿಕೊಂಡಿರುವ ರಾಜಿ ಅರ್ಜಿಯನ್ನು ನಿಪಿ-32 ಎಂದು, ರಾಜಿಯ ಅರ್ಜಿಯಂತೆ ನ್ಯಾಯಾಲಯವು ನೀಡಿರುವ ಡಿಕ್ರಿಯ ಆದೇಶದ ಪ್ರತಿಯನ್ನು ಸಾಕ್ಷಿ ಗುರುತಿಸಿದ ಮೇರಗೆ ಅದನ್ನು ನಿಪಿ-33 ಎಂದು ಗುರುತಿಸಲಾಯಿತು.

ನಿಪಿ-33 ಅನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. 11.09.1933 ರಲ್ಲಿ O.S. 12/09 ರ ವಾದಿಯ ತಂದೆ ಹೊನ್ನೇಗೌಡ, ಅವರ ಅಣ್ಣ ನಂಜ ಅಲಿಯಾಸ್ ಬೋಗಿ ಸರ್ವೆ ನಂ. 80 ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ತಿಮ್ಮಯ್ಯ ನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂ. 80, 80/6 ಆಗಿರುತ್ತದೆ ಎಂದು ನಿಪಿ-33 ರಲ್ಲಿ ನಮೂದು ಆಗಿರುವುದಿಲ್ಲ. ಸರ್ವೆ ನಂ. 80/6 ರಲ್ಲಿ ತಿಮ್ಮ ಅಲಿಯಾಸ್ ತಿಮ್ಮಯ್ಯ ರವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂ. 80/6 ರಲ್ಲಿ ತಿಮ್ಮಯ್ಯ ಮರಣ ಹೊಂದಿದ ನಂತರ ಅವರ ಹೆಂಡತಿ ಮರಿಯಮ್ಮ ರವರು ಸ್ವಾಧೀನದಲ್ಲಿ ಇದ್ದಾರೆ ಎಂದು ನಿಪಿ-33 ರಲ್ಲಿ ನಮೂದು ಮಾಡಿರುವುದಿಲ್ಲ. ಸರ್ವೆ ನಂ. 80/6 ರಲ್ಲಿ 2 ಎಕರೆ 20 ಗುಂಟೆ ಜಮೀನು ನಮ್ಮ ತಾಯಿಯ ಹೆಸರಿಗೆ MR 5/2005-06 ಎಂದು ನಿಪಿ-33 ರಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ನಾವು ಖರೀದಿ ಮಾಡಿದ 11.09.1933 ರಲ್ಲಿ ಸರ್ವೆ ನಂ. 80/6 ಮತ್ತು 80/1 ಎರಡ ಚಕ್ಕುಬಂಧಿಗಳು ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-33 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

O.S. 12/2009 ರಲ್ಲಿ ಶಿವನಂಜಪ್ಪ ಮತ್ತು ನನ್ನ ತಾಯಿ ಮರಿಯಮ್ಮ ರವರು ಇಬ್ಬರೂ ಮಾಹಿತಿ ನೀಡಿದ್ದ ಮೇರೆಗೆ ಮಾಹಿತಿ ಆಧಾರದ ಮೇರೆಗೆ ರಾಜಿ ಪತ್ರವನ್ನು ಬರೆಸಿರುತ್ತಾರೆ. O.S. 12/2009 ರ ದಾವೆಯಲ್ಲಿ ಹೊನ್ನೇಗೌಡ ಅಲಿಯಾಸ್ ತಮ್ಮಯ್ಯ ಮತ್ತು ನಂಜಪ್ಪ ರವರು ಪಕ್ಷಗಾರಾಗಿರಲಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ